ಗಳನ್ನು ಕೇಳಲು ಬಂದಿದ್ದೆ. ಆದರೆ ಈಗ ನಾನು ಕಾಯಲು ಆಗುವುದಿಲ್ಲ. ಕಾಶಿಗೆ ಹೋಗಿ ನನ್ನ ಮುಂದೆ ಹಾಡು.''

''ಅಯ್ಯೋ, ಅನ್ನಪೂರ್ಣಾದೇವಿಯೇ ನನ್ನ ಹಾಡುಗಳನ್ನು ಕೇಳಲು ಬಂದಿದ್ದಳು! ಅವಳನ್ನು ಕಾಯಲು ಹೇಳಿ, ನಿರಾಶೆಗೊಳಿಸಿದೆನಲ್ಲಾ!'' ಎಂದು ರಾಮಪ್ರಸಾದನ ಹೃದಯ ವಿಲಿವಿಲಿ ಒದ್ದಾಡಿತು. ದೇವಿ ಹೇಳಿದಂತೆ ಒಡನೆಯೇ ಕಾಶಿಗೆ ಹೊರಟನು. ಆದರೆ ದಾರಿ ಮಧ್ಯದಲ್ಲಿಯೇ ತ್ರಿವೇಣಿ ಎಂಬ ಸ್ಥಳದಲ್ಲಿ ದೇವಿಯಿಂದಲೇ ಆದೇಶವಾಯಿತು, 'ಕಾಶಿಗೆ ಹೋಗುವುದು ಬೇಡ, ಇಲ್ಲಿಯೇ ಹಾಡಿದರೆ ಸಾಕು' ಎಂದು. ರಾಮಪ್ರಸಾದನು ಅಲ್ಲಿಯೇ ಕುಳಿತು ಮನದುಂಬಿ ಹಾಡಿದನು. ದೇವಿಯು ಕೇಳಿಸಿಕೊಂಡಳೆಂಬ ಸಂತೃಪ್ತಿಯಿಂದ ತುಂಬಿಹೋದನು ರಾಮಪ್ರಸಾದ.

ಇಂಥ ಅನೇಕ ಘಟನೆಗಳು ರಾಮಪ್ರಸಾದನ ಜೀವನದಲ್ಲಿ ಕೇಳಬರುತ್ತವೆ. ಒಂದಂತೂ ನಿಜ. ಅವನು ಕಾಳಿಯ ಧ್ಯಾನದಲ್ಲಿ ತನ್ನನ್ನೇ ಲೀನವಾಗಿಸಿಕೊಂಡನು, ಕಠಿಣ ಸಾಧನೆಯಲ್ಲಿ ತೊಡಗಿದನು. ಅನೇಕ ತೆರನಾದ ತಾಂತ್ರಿಕ ಸಾಧನೆಗಳನ್ನು ಕೈಗೊಂಡನು. ಕಟ್ಟಕಡೆಗೆ ಆದ್ಯಾಶಕ್ತಿ ಮಹಾಮಾಯೆಯ ಸಾಕ್ಷಾತ್ಕಾರದ ದಿವ್ಯ ಆನಂದಕ್ಕೆ ಭಾಗಿಯಾದನು. ಈ ದಿವ್ಯಾನುಭವದೊಂದಿಗೆ ರಾಮಪ್ರಸಾದನ ಮುಂದಿನ ದಿನಗಳು ಸಂತೋಷದ ಸಂತೆಯಾದವು; ಹರ್ಷದ ಹೊನಲಾದವು; ದಿವ್ಯೋನ್ಮಾದದ ಅಲೆಗಳಾದವು. ಜಗನ್ಮಾತೆಯ ಸಾನ್ನಿಧ್ಯವನ್ನು ಎಂದೆಂದಿಗೂ ಅನುಭವಿಸುವ ದಿವ್ಯಶಿಶುವಾದನು ರಾಮಪ್ರಸಾದ.

ರಾಮಪ್ರಸಾದನ ಪತ್ನಿ ಶರ್ವಾಣಿಯ ಬಗ್ಗೆ ಉಲ್ಲೇಖಗಳು ಅಷ್ಟು ಸಿಕ್ಕುವುದಿಲ್ಲ. ಏನೇ ಆಗಲಿ, ಪತಿಯ ಸಾಧನೆಗೆ ಸಹಕರಿಸಿ ನಿಜವಾದ ಅರ್ಥದಲ್ಲಿ ಸಹಧರ್ಮಿಣಿಯಾಗಿದ್ದಳು ಈ ಮಹಾಮಾತೆ. ಅವಳು ಕುಟುಂಬವನ್ನು ಸರಿದೂಗಿಸಿಕೊಂಡು ಹೋದದ್ದರಿಂದಲೇ, ಎಲ್ಲವನ್ನೂ ಮರೆತು ಭಗವತಿಯ ಚಿಂತನೆಯಲ್ಲಿ ಇರಲು ಸಾಧ್ಯವಾಯಿತು ರಾಮಪ್ರಸಾದನಿಗೆ.

ದಿನಗಳು ಕಳೆದವು; ಮಾಸಗಳು ಸರಿದುಹೋದವು; ವರ್ಷಗಳು ಉರುಳಿದವು. ರಾಮಪ್ರಸಾದನ ಅತ್ಯಂತ ಆಪ್ತಮಿತ್ರ ರಾಜಾ ಕೃಷ್ಣಚಂದ್ರನು ಕಾಯಿಲೆ ಹಿಡಿದು ಮಲಗಿದನು. ಮೃತ್ಯುಶಯ್ಯೆಯಲ್ಲಿ ಇರುವ ಅವನನ್ನು ನೋಡಲು ರಾಮಪ್ರಸಾದನು ಧಾವಿಸಿದನು. ಅವನ ಹಾಸಿಗೆಯ ಹತ್ತಿರವೇ ಕುಳಿತು ಭಗವತಿಯ ಬಗೆಗಿನ ಹಾಡುಗಳನ್ನು ಹಾಡಿದನು. ಅವನ್ನು ಕೇಳುತ್ತಲೇ, ತಾಯಿಯ ಪುಣ್ಯನಾಮವನ್ನು ಉಚ್ಚರಿಸುತ್ತಲೇ ಆ ಪುಣ್ಯಜೀವಿಯು ಪ್ರಾಣಬಿಟ್ಟನು.

ರಾಮಪ್ರಸಾದನು ಸಿದ್ಧಾವಸ್ಥೆಯನ್ನು ಪಡೆದ ವಿಭೂತಿಪುರುಷ. ಅದರ ಉತ್ಕಟ ಅವಸ್ಥೆಯನ್ನು ನಾವೀಗ ನೋಡುತ್ತೇವೆ. ಒಮ್ಮೆ ಒಳ್ಳೆಯ ಉಡುಪುಗಳನ್ನು ಧರಿಸುವನು. ಮತ್ತೊಮ್ಮೆ ಧೂಳಿನಿಂದ ತುಂಬಿಕೊಂಡಿರುವನು. ಒಮ್ಮೆ ಹರ್ಷದ ಹೊನಲು, ಮತ್ತೊಮ್ಮೆ ವಿಷಾದದ ಕಡಲು. ಕ್ರಮೇಣ ದಿನನಿತ್ಯದ ದಿನಚರಿ ತಪ್ಪಿಹೋಯಿತು. ಆಸನದಲ್ಲಿ ಗಂಟೆಗಟ್ಟಲೆ ಕಾಲ ಅವನು ಧ್ಯಾನಮಗ್ನನಾಗಿ ಕುಳಿತಿರುವನು. ಇನ್ನೊಮ್ಮೆ ಹಾಡುಗಳನ್ನು ಹಾಡುತ್ತ ದಿನವೆಲ್ಲ ಕಳೆಯುವನು. ಆಹಾರ, ನಿದ್ರೆ ಇವೆಲ್ಲದರ ಬಗ್ಗೆ ಗಮನ ಕಳೆದುಹೋಯಿತು. ಕೇವಲ ಭಗವತಿಯ ಚಿಂತನೆ, ಧ್ಯಾನ, ಕೀರ್ತನೆ, ಉನ್ಮಾದಗಳೊಂದೇ ಉಳಿಯಿತು.

ಹೀಗಿರುವಾಗ ದೀಪಾವಳಿಯ ಪರ್ವಕಾಲ ಬಂದೊದಗಿತು. ಬಂಗಾಳದಲ್ಲಿ ಅಮಾವಾಸ್ಯೆಯ ರಾತ್ರಿ ಕಾಳೀಪೂಜೆಯನ್ನು ಮಾಡುತ್ತಾರೆ. ಅದರಂತೆ, ಕಾಳಿಯ ಮಣ್ಣಿನ ಮೂರ್ತಿಯನ್ನು ರಾಮಪ್ರಸಾದನು ಪೂಜಿಸಿದನು. ರಾತ್ರಿಯಿಡೀ ಕಾಳಿಯ ಆರಾಧನೆಯಲ್ಲಿ ಕಳೆದನು. ಪ್ರತಿವರ್ಷವೂ ಈ ಸಮಯದಲ್ಲಿ ಆನಂದದಿಂದ ಇರುತ್ತಿದ್ದನು. ಆದರೆ ಈ ಬಾರಿ ತುಂಬು ಗಂಭೀರಭಾವವನ್ನು ತಳೆದನು. ಅವನು ಎಲ್ಲರಿಂದಲೂ ದೂರವಾಗಿದ್ದು , ಏಕಾಂಗಿಯಾಗಿದ್ದನು. ಬೆಳಗ್ಗೆ ಕಾಳೀಮೂರ್ತಿಯನ್ನು ವಿಸರ್ಜಿಸುವ ಕಾಲ. ಎಂದಿನಂತೆ ಕಲಶವನ್ನು ಹೊತ್ತು ರಾಮಪ್ರಸಾದನು ಮುಂದೆಹೋದನು. ಭಕ್ತರು ಕಾಳಿಯ ಪ್ರತಿಮೆಯನ್ನು ಹೊತ್ತು ಹಿಂದೆ ಬಂದರು. ಗಂಗಾನದಿಯನ್ನು ಪ್ರವೇಶಿಸಿದ ಈ ಮಹಾನ್ ಸಾಧಕನು ಕಂಠಪೂರ್ತಿ ನೀರಿನಲ್ಲಿ ನಿಂತು, ನಾಲ್ಕು ಹಾಡುಗಳನ್ನು ಹಾಡಿದನು. ಗಂಗೆಯ ಗರ್ಭದಲ್ಲಿಯೇ ತನ್ನ ಪ್ರಾಣವನ್ನು ತ್ಯಜಿಸಿದನು. ತಾಯಿ ಗಂಗೆಯು ಈ ದಿವ್ಯಶಿಶುವನ್ನು ತಾಯಿಕಾಳಿಯೆಡೆಗೆ ಒಯ್ದುಬಿಟ್ಟಳು. ರಾಮಪ್ರಸಾದನ ಭಕ್ತಿಗಾನ ಲಹರಿಯನ್ನು ಅಡಗಿಸಿಕೊಂಡ ಗಂಗಾನದಿಯ ಅಲೆಗಳ ಲಹರಿಯು ಯಥಾಪ್ರಕಾರ ಹರಿಯಲಾರಂಭಿಸಿತು.

ರಾಮಪ್ರಸಾದನ ಕಾಳೀಭಕ್ತಿ, ಭಗವತ್ಕಾತರತೆ, ದಿವ್ಯೋನ್ಮಾದ ಮತ್ತು ದಿವ್ಯಾನಂದಗಳನ್ನು ಇನ್ನೊಬ್ಬ ಯುಗಚೇತನರ ಬಾಳಿನಲ್ಲಿಯೂ ಕಾಣುತ್ತೇವೆ. ಅವರೇ ಶ್ರೀರಾಮಕೃಷ್ಣರು. ''ಅಮ್ಮಾ, ರಾಮಪ್ರಸಾದ, ಕಮಲಾಕಾಂತ ಮೊದಲಾದ ಭಕ್ತರಿಗೆ ನೀನು ದರ್ಶನವನ್ನು ಕೊಟ್ಟೆ. ನನಗೆ ಕೊಡಲಾರೆಯಾ ತಾಯಿ?'' ಎಂದು ಅವರು ಹಂಬಲಿಸಿದ್ದನ್ನು ಕಾಣುತ್ತೇವೆ. ಮತ್ತೆ ಮತ್ತೆ ಅವರ ಮುಖಾರವಿಂದದಿಂದ ರಾಮಪ್ರಸಾದನ ಹಾಡುಗಳು ಸಜೀವವಾಗುತ್ತಿದ್ದವು, ತಮ್ಮ ಮೂಲ ಭಾವವನ್ನು ಅಭಿವ್ಯಕ್ತಗೊಳಿಸುತ್ತಿದ್ದವು.


ರಾಮಪ್ರಸಾದನ ಸಂದೇಶವೇನು? ಅದು ಅವನ ಹಾಡುಗಳಲ್ಲಿಯೇ ಅಡಗಿದೆ. ಸಾಧನೆಯ ಆವಶ್ಯಕತೆಯ ಬಗ್ಗೆ ಹೇಳುತ್ತ ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹಾಡುತ್ತಿದ್ದ ಆತನ ಹಾಡಿನೊಂದಿಗೆ ಈ ಸ್ಮರಣಚಿತ್ರಕ್ಕೆ ಕೊನೆಯನ್ನು ಹಾಡೋಣ:

**ನಿನ್ನ ಬಾಳಿನ ಹೊಲವು ಪಾಳು ಬಿದ್ದಿದೆಯಲ್ಲೊ**
**ಕೃಷಿಗೈಯಲೂ ಕೂಡ ತಿಳಿಯದಿರುವೆ;**
**ಎಂಥ ಹೊನ್ನನು ಬೆಳೆದು ತೆಗೆಯಬಹುದಾಗಿತ್ತು**
**ಕ್ಷಣಕಾಲ ಮೈಮುರಿದು ದುಡಿದಿದ್ದರೆ !**

**ತಾಯ ಶ್ರೀನಾಮವನು ಬೀಜವಾಗಿಸಿ ಬಿತ್ತಿ,**
**ಪ್ರೇಮವಾರಿಧಿ ಹೊಯ್ದು ಹಸನುಗೊಳಿಸೊ;**
**ನಿನಗೆ ಈ ಕೆಲಸವೂ ಕಷ್ಟವಾದರೆ ಹೇಳು,**
**ರಾಮಪ್ರಸಾದನಿದೊ ನೆರವಿಗಿಹನೊ..** *

# ಗುರುಭಕ್ತಿಯ ಮಹಿಮೆ


ಮೂಲ: ಮಹಾಭಾರತ | ನಿರೂಪಣೆ: ರೇವತಿ ಮತ್ತು ಶಕ್ತಿ ವಿನ್ಮಣಿ | ಚಿತ್ರ: ನಾಗೇಶ್ವರರಾವ್










4
ಒಂದು ದಿನ ...
ಪ್ರಿಯ ಶಿಷ್ಯಂದಿರೇ... ಇದೋ ನಿಮಗೆ ಪರೀಕ್ಷೆ! ಒಂದೊಂದು ಕೊಡವನ್ನು ಎತ್ತಿಕೊಳ್ಳಿ. ಅದರಲ್ಲಿ ನೀರು ತುಂಬಿಸಿ ತನ್ನಿ. ಯಾರು ಮೊದಲು ನೀರು ತುಂಬಿಸಿ ತರುತ್ತಾರೆ ಎಂದು ನೋಡುವುದೇ ಈ ಸ್ಪರ್ಧೆ.
5
ಗುರುದೇವಾ, ಈ ಕೊಡಗಳ ಬಾಯಿ ಮುಚ್ಚಿದೆ. ಅದಕ್ಕೆ ನೀರು ತುಂಬಿಸುವುದು ಹೇಗೆ?
6
ಮಕ್ಕಳೇ, ಕೊಡವನ್ನು ಗಮನಕೊಟ್ಟು ನೋಡಿ.
ಹೌದು, ಇದರಲ್ಲಿ ಕಾಳುಮೆಣಸಿನಂಥ ಸಣ್ಣ ತೂತು ಇದೆ.
7
ಗುರುದೇವಾ, ಈ ತೂತಿನ ಮೂಲಕ ನೀರು ಒಳಕ್ಕೆ ಹೋಗುವುದೋ ಇಲ್ಲವೋ ಸಂದೇಹ. ಹಾಗಿರುವಾಗ ನೀರು ಹೇಗೆ ತುಂಬುವುದು?
ಮನಸ್ಸಿದ್ದಲ್ಲಿ ಮಾರ್ಗ. ಒಂದು ಕೊಡವನ್ನು ತೆಗೆದುಕೋ, ಪ್ರಯತ್ನ ಮಾಡಿ ನೋಡು.


8
ಬಿಲ್ವಿದ್ಯೆಯನ್ನು ಕಲಿಯಬೇಕಾದರೆ ಈ ಕೊಡದ ಮೂರ್ಖ ವಿದ್ಯೆಯನ್ನೂ ಕಲಿಯಬೇಕೇನೋ!
ಬಹಳ ಹೊತ್ತು ಈ ಕೊಡವನ್ನು ನೀರಿನಲ್ಲಿ ಮುಳುಗಿಸಿ ಹಿಡಿದರೂ, ಅದರ ಒಳಕ್ಕೆ ನೀರು ತುಂಬುತ್ತಿಲ್ಲ.
ನಾನು ಒಂದೇಟು ಹಾಕಿದರೆ ಇದರ ಮುಚ್ಚಳ ಒಡೆದುಹೋದೀತು. ಆದರೆ ಹಾಗ ಮಾಡಿದರೆ ಗುರುಗಳು ಒಪ್ಪಲಾರರು.
9
ಇದು ನಿಜಕ್ಕೂ ಅಸಾಧ್ಯವಾಗಿದ್ದರೆ ನಮ್ಮ ಗುರುಗಳು ಹೀಗೆ ಮಾಡಲು ಹೇಳಲಾರರು. ಕೊಡವನ್ನು ನೀರಿನಲ್ಲಿ ಮುಳುಗಿಸದೆ ಅದರಲ್ಲಿ ನೀರು ತುಂಬಿಸುವುದು ಹೇಗೆ ಎಂದು ನಾನು ತಿಳಿಯಬೇಕು. ನೀರಿನ ಅಧಿದೇವತೆಯಾದ ವರುಣನನ್ನು ಆವಾಹಿಸಿದರೆ, ಆಗ ಕೊಡದಲ್ಲಿ ನೀರು ತುಂಬಬಹುದು. ಪ್ರಯತ್ನಿಸಿ ನೋಡುತ್ತೇನೆ.
10
ಕೊಡದಲ್ಲಿ ನೀರನ್ನು ತುಂಬಿಸಲು ಅರ್ಜುನನು ವರುಣನ ಮಂತ್ರವನ್ನು ಉಚ್ಚರಿಸಿದ. ಆಗ ವರುಣ ದೇವತೆ ಕೊಡದಲ್ಲಿ ಬಂದು ಪ್ರತ್ಯಕ್ಷನಾದ. ಆಗ ಕೊಡದಲ್ಲಿ ನೀರು ತುಂಬಿತು.
11
ಗುರುದೇವಾ, ಈ ಕೆಲಸ ಯಾರಿಂದಲೂ ಸಾಧ್ಯವಿಲ್ಲ.
ಗುರುಗಳೆ, ಕೊಡದ ಕಾಲುಭಾಗವೂ ನೀರು ತುಂಬಲಿಲ್ಲ.
ಇದು ರಾಜಕುಮಾರರು ಮಾಡುವ ಕೆಲಸದಂತೆ ಕಾಣುತ್ತಿಲ್ಲ. ನಾನೇನೋ ಪ್ರಯತ್ನಿಸಿದೆ. ಕೊಡದ ಅರ್ಧಭಾಗವೂ ತುಂಬಲಿಲ್ಲ.
ಸರಿ, ಅರ್ಜುನನೊಬ್ಬನೇ ಉಳಿದವನು. ಅವನೆಲ್ಲಿ?